# ಉದಯವಾಣಿ

**Wednesday 25th December 2019, Page No.04**

## Science Camp tomorrow in RVCE campus

### ನಾಳೆಯಿಂದ ವಿಜ್ಞಾನ ಶಿಬಿರ

**ಕೆಂಗೇರಿ:** ಮೈಸೂರು ರಸ್ತೆಯ ಆರ್.ವಿ.ತಾಂತ್ರಿಕ ವಿದ್ಯಾಲಯದ ವತಿಯಿಂದ 5 ದಿನಗಳ ವಿಜ್ಞಾನ ಶಿಬಿರ (ಡಿ. 26–30) ಆಯೋಜಿಸಲಾಗಿದೆ ಎಂದು ಕಾರ್ಯಕ್ರಮದ ಸಂಯೋಜಕ ಡಾ.ವಿದ್ಯಾನಿರಂಜನ್ ತಿಳಿಸಿದರು. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಹಯೋಗದೊಂದಿಗೆ ಆಯೋಜಿಸಲಾದ ಈ ಕಾರ್ಯಕ್ರಮದಲ್ಲಿ ವಿವಿಧ ಪಿಯು ಕಾಲೇಜಿನ 275 ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮತ್ತು ತಾಂತ್ರಿಕ ಸಂಶೋಧನೆಗಳಲ್ಲಿ ಅರಿವು ಮೂಡಿಸುವುದು ಶಿಬಿರದ ಉದ್ದೇಶವಾಗಿದೆ. ದೇಶದ ಶ್ರೇಷ್ಠ ವಿಜ್ಞಾನಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಲಿದ್ದಾರೆ ಎಂದರು. ಈ ವೇಳೆ ಪ್ರಾಂಶುಪಾಲ ಡಾ.ಕೆ.ಎನ್.ಸುಬ್ರಹ್ಮಣ್ಯ, ಡಾ.ಗುಲಾಬ್ ಪೇದ್ಕರ್, ಡಾ.ಪತೂರ್ ಕೊಂಡಯ್ಯ, ಡಾ.ಅಲೆಕ್ಸ್ ಹಂಕೆ, ರಾಘವೇಂದ್ರ ಪ್ರಸಾದ್ ಇತರರಿದ್ದರು.

ಉದಯವಾಣಿ Wed, 25 Decem
https://epape